International Journal of Kannada Research 2023; 9(4): 111-114

International Journal of Kannada Research
www.kannadajournal.com

**ISSN: 2454–5813**
IJKR 2023; 9(4): 111-114
© 2023 IJKR
www.kannadajournal.com
Received: 23-10-2023
Accepted: 26-11-2023

**ಜಿ. ಎಂ. ಹೇಮಲತ**
ಡಾ. ಎಂ.ಚಿದಾನಂದಮೂರ್ತಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ, ಕರ್ನಾಟಕ, ಭಾರತ

**ಡಾ. ಹೆಚ್. ವಿಶ್ವನಾಥ್**
ಡಾ. ಎಂ.ಚಿದಾನಂದಮೂರ್ತಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ, ಕರ್ನಾಟಕ, ಭಾರತ

**Corresponding Author:**
**ಜಿ. ಎಂ. ಹೇಮಲತ**
ಡಾ. ಎಂ.ಚಿದಾನಂದಮೂರ್ತಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ, ಕರ್ನಾಟಕ, ಭಾರತ

# ದು.ಸರಸ್ವತಿಯವರ ಸಣ್ತಿಮ್ಮಿ ಪುರಾಣ ನಾಟಕದಲ್ಲಿ ಸಾಮಾಜಿಕತೆಯ ಪ್ರತಿಬಿಂಬ

**ಜಿ. ಎಂ. ಹೇಮಲತ, ಡಾ. ಹೆಚ್. ವಿಶ್ವನಾಥ್**

**ಪೀಠಿಕೆ**

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ದು. ಸರಸ್ವತಿಯವರ ಕೊಡುಗೆ ಅಪಾರವಾದುದು. ಪೌರ ಮಹಿಳಾ ಕಾರ್ಮಿಕರನ್ನು ಸಂಘಟಿಸುವುದರಲ್ಲಿ ಪಾತ್ರವಹಿಸುವ ಮೂಲಕ ವಿವಿಧ ಹೋರಾಟಗಳಲ್ಲಿ ಗುರುತಿಸಿಕೊಂಡವರು. ಲೇಖಕಿಯಾಗಿರುವಂತೆ ಉತ್ತಮ ರಂಗಕಲಾವಿದೆಯಾಗಿ ಹಲವು ನಾಟಕಗಳು, ಏಕಾಂಕಗಳ ಮೂಲಕ ಪರಿಚಿತರಾಗಿದ್ದಾರೆ. ಅವರ ನಾಟಕ ರಚನೆ ಮತ್ತು ಹೋರಾಟ ಇವೆಲ್ಲವೂ ಒಂದೇ ದೇಹದ ವಿವಿಧ ಭಾಗಗಳಂತೆ ಅನ್ಯೋನ್ಯವಾಗಿದೆ.

2018ರಲ್ಲಿ ದು. ಸರಸ್ವತಿ ಅವರು ಆರು ಏಕಾಂಕ ನಾಟಕಗಳನ್ನೊಳಗೊಂಡ 'ಸಣ್ತಿಮ್ಮಿ ಪುರಾಣ' ಎಂಬ ಸಂಕಲನವನ್ನು ಪ್ರಕಟಿಸಿದ್ದಾರೆ. ದೇವನೂರ ಮಹಾದೇವ ಅವರು ಮೈಸೂರು ಪ್ರಾಂತ್ಯದ ಆಡುಭಾಷೆಯನ್ನು ತಮ್ಮ 'ಕುಸುಮಬಾಲೆ'ಯಲ್ಲಿ ಬಳಸಿದಂತೆ ಸರಸ್ವತಿಯವರು ತುಮಕೂರು ಪ್ರದೇಶದ ಗ್ರಾಮೀಣ ಭಾಷೆಯಲ್ಲಿ ಈ ನಾಟಕಗಳನ್ನು ರಚಿಸಿದ್ದಾರೆ. ಇಲ್ಲಿ ಸಣ್ತಿಮ್ಮಿ ಕಣ್ಣಲ್ಲಿ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಸಂಗತಿಗಳನ್ನು ಗಮನಿಸಿದ್ದಾರೆ. ಸದ್ಯದ ಸಾಂಸ್ಕೃತಿಕ ರಾಜಕಾರಣಗಳನ್ನು ಜನರ ಭಾಷೆಯಲ್ಲೇ ಜನರಿಗೆ ತಲುಪಿಸುತ್ತಿರುವ ಹೆಗ್ಗಳಿಕೆ ಅವರದು.

ದು. ಸರಸ್ವತಿ ಅವರ ನಾಟಕಗಳಲ್ಲಿ 'ಸಣ್ತಿಮ್ಮಿ' ಎಂಬುದು ಕೇವಲ ಒಂದು ಹೆಸರಾಗಿ ಬಂದಿರದೆ, ಅದು ಅಂತರಂಗದ ಅರಿವಾಗಿ, ಹೃದಯದ ಭಾಷೆಯಾಗಿ, ತಳ ಸಂಸ್ಕೃತಿಯ ಅನುಭವವಾಗಿ, ಸಮಾನತೆಯ ಸಂಕೇತವಾಗಿ, ಪ್ರತಿರೋಧದ ಅಸ್ತ್ರವಾಗಿ ಕಾಣಿಸಿಕೊಂಡಿದೆ. ಇಂದು ರಾಜಕಾರಣಿಗಳು, ಪ್ರತಿಷ್ಠಿತ ವರ್ಗಗಳು, ಚಿಂತಕರು, ಪುರಾಣಗಳ ಕುರಿತಂತೆ ಮಾತನಾಡುತ್ತಾರೆ. ಅವರ ಕಣ್ಣಲ್ಲಿ ಪುರಾಣಗಳನ್ನು ನೋಡುವಂತೆ ಜನರನ್ನು ಒತ್ತಾಯಿಸುತ್ತಾರೆ. ಜನರೂ ಅದಕ್ಕೆ ಮರುಳಾಗುತ್ತಾರೆ. ಇಂತಹ ಸಂದರ್ಭದಲ್ಲಿ ದೇಶದಲ್ಲಿ ಸಣ್ತಿಮ್ಮಿಯಂತಹ ಗ್ರಾಮೀಣ ಹೆಣ್ಣು ಮಕ್ಕಳು ನೋಡುವ ಪುರಾಣಗಳಿವೆ, ರಾಮಾಯಣಗಳಿವೆ, ಅದರಲ್ಲಿ ಅವರ ಬದುಕು ನೋವು ಜಂಜಾಟಗಳಿವೆ. ಸಣ್ತಿಮ್ಮಿ ಪುರಾಣ ಅಸಂಗತಿಗಳನ್ನು ಅದೇ ಗ್ರಾಮೀಣ ಭಾಷೆಯಲ್ಲಿ ತೆರೆದಿಡುತ್ತದೆ. ಒಂದು ರೀತಿಯಲ್ಲಿ ನಗರದ ಜನರ ಭಾಷೆಯನ್ನು ಮತ್ತು ಪುರಾಣಗಳನ್ನು ವ್ಯಂಗ್ಯ ಮಾಡುತ್ತದೆ. ಶಿಷ್ಟ ಪುರಾಣಗಳಿಗೆ ಪ್ರತಿಯಾಗಿ ಜಾನಪದ ಪುರಾಣಗಳನ್ನು ನೆಲೆಯಾಗಿಟ್ಟುಕೊಂಡು ಪಾತ್ರಗಳನ್ನು ವಿಶ್ಲೇಷಿಸುವ ಸಣ್ತಿಮ್ಮಿ ಪಾತ್ರ ಗಮನಾರ್ಹವಾದುದು.

**೧. ರಾಮಾಯ್ಣ**

ದು. ಸರಸ್ವತಿಯವರ ಸಣ್ತಿಮ್ಮಿ ಪುರಾಣ ಕೃತಿಯಲ್ಲಿ ಆರು ಏಕಾಂಕಗಳನ್ನು ಕಾಣಬಹುದಾಗಿದೆ. ಅದರಲ್ಲಿ 'ರಾಮಾಯ್ಣ' ಮೊದಲ ಭಾಗವಾಗಿದ್ದು, ಇದು ಪೌರಾಣಿಕ ಮತ್ತು ಮಹಾಕಾವ್ಯದ ವಸ್ತುಗಳನ್ನು ಒಳಗೊಂಡಿದೆ. ರಾಮಾಯಣದ ಒಟ್ಟು ಚೌಕಟ್ಟನ್ನು ಈಗಿನ ಕಾಲಮಾನಕ್ಕೆ ಅಂದರೆ ವರ್ತಮಾನಕ್ಕೆ ಸರಿಹೊಂದುವಂತೆ ಬರೆಯಲಾಗಿದೆ. ಮಹಿಳಾ ದೃಷ್ಟಿಕೋನವನ್ನು ಆಧರಿಸಿ ರಾಮಾಯಣವನ್ನು ಗ್ರಹಿಸಲಾಗಿದೆ. ರಾಮಾಯಣ ಮತ್ತು ಮಹಾಭಾರತವನ್ನು ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿ ಅನೇಕ ಕಥಾ ವಸ್ತುವಾಗಿ ಬಳಸಿಕೊಳ್ಳಲಾಗಿದೆ.

ಈ ಎರಡೂ ಮಹಾಕಾವ್ಯಗಳು ಆಯಾ ಕಾಲದ ಬರಹಗಾರರ ಬತ್ತಳಿಕೆಯಿಂದ ಹೊರಬರುವ ಕಥನ ಸಾಹಿತ್ಯವಾಗಿ ಮರುರೂಪುಗೊಳ್ಳುತ್ತಲೇ ಬಂದಿದೆ. ಇಲ್ಲಿ ದು. ಸರಸ್ವತಿಯವರು ಮಹಿಳಾಪರ

ಹೋರಾಟಗಾರ್ತಿ ಮಾತ್ರವಲ್ಲದೆ ಹಲವು ಸಂಘಟನೆಗಳಲ್ಲಿ, ಚಳುವಳಿಗಳಲ್ಲಿ ತಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ. ಇವರ ದೃಷ್ಟಿಯಲ್ಲಿ ಹೆಣ್ಣು ಎಲ್ಲಾ ಕಾಲದಲ್ಲಿಯೂ ಶೋಷಣೆಯ ಭಾಗವಾಗಿ ರೂಪುಗೊಂಡಿದ್ದು, ತಮ್ಮದೇ ಆದ ದೃಷ್ಟಿಕೋನದಲ್ಲಿ ರಾಮಾಯಣವನ್ನು ವಿಶ್ಲೇಷಿಸಲು ಮುಂದಾಗಿದ್ದಾರೆ. ಈ ರಾಮಾಯ್ಣದಲ್ಲಿ ಸೀತೆಯ 'ಸಾಮಾಜಿಕ ಪ್ರಜ್ಞೆ' ಎಷ್ಟಿತ್ತೆಂದರೆ "ರಾಮುಂಗೆ ನಡ್ದು ಸಾಕಾದ್ರೆ ಮೆದುವಾಗಿ ಕಾಲೊತ್ತೋಳು, ಅವ್ನ ಕಾಲ್ಗೆ ಮುಳ್ ಚುಚ್ಚರಿ ಬಗ್ದು ತಗ್ಯೋಳು. ಅವ್ನು ನೀರು ಉಯ್ಯೋವಾಗ ಕಲ್'ತಾಂಡು ಬೆನ್ ತಿಕ್ಕೋಳು. ಅವ್ನು ನಿದ್ದೆವೋದ್ರೆ ತೊಡೆ ಮ್ಯಾಲೆ ತಲೆ ಇರ್ಸ್‌ಕೊಂಡು ಹೇನು, ಸೀರು, ಕುಕ್ಕೋಳು. ಇದು ಸೀತೆಗೆ ರಾಮನ ಮೇಲೆ ಇದ್ದಂತಹ ಪ್ರೀತಿ ಮತ್ತು ಕಾಳಜಿ. ಆದ್ರೆ ಸೀತೆನಾ ನೊಂದ್ಕಂಡ, ಸುಸ್ತಾತ, ಬ್ಯಾಸ್ರ ಆತ ಅಂತ ಕೇಳೋರೆ ಇಲ್ಲ. ಅವ್ಳಿಗವ್ನೆ ಆಧಾರ" ಈ ಸಂಭಾಷಣೆಯ ಮುಖ್ಯ ಸಂವೇದನೆ ಇಡೀ ಕಥೆಯಲ್ಲಿ ಕಂಡುಬರುತ್ತದೆ.

ಇಲ್ಲಿ ಹೆಣ್ಣಾದವಳು ಸಂಸಾರದ ಎಲ್ಲಾ ಜವಾಬ್ದಾರಿಯನ್ನು ನಿರ್ವಹಿಸಬೇಕು. ಆದರೆ ಆಕೆಯ ಸಂಕಟ, ನೋವು, ನಲಿವು, ಹತಾಷೆಯನ್ನು ಯಾರು ಆಲಿಸುವುದಿಲ್ಲವೆಂಬ ನಿರ್ಲಕ್ಷ್ಯವನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ರಾಮಾಯ್ಣವನ್ನು ಕಟ್ಟಿರುವ ಬಗೆ ಇಲ್ಲಿ ಕಂಡುಬರುತ್ತದೆ. ಈ ನಾಟಕದಲ್ಲಿ ಪುರಾಣ ವಸ್ತು ಪ್ರತಿರೂಪವನ್ನು ಬಳಸಿಕೊಂಡು ವಾಸ್ತವವನ್ನು ವರ್ತಮಾನದ ಜಗತ್ತನ್ನು ವಿಮರ್ಶೆಗೆ ಒಡ್ಡುವುದೇ ಈ ನಾಟಕದ ಆಶಯವಾಗಿದೆ. ಇಲ್ಲಿ ಜನಕ ಮಹಾರಾಜ ತನ್ನ ಜನರ ಜೊತೆಗೆ ವ್ಯವಸಾಯ ಮಾಡುತ್ತಿದ್ದ. ಆದರೆ ಈಗಿನ ರಾಜಕಾರಣಿಗಳು ಕುಡಿದ ನೀರು ಅಲ್ಲಾಡದ ಹಾಗೆ ಐಷಾರಾಮಿ ಜೀವನ ನೆಡೆಸುವುದರೊಂದಿಗೆ ಚುನಾವಣೆಯಲ್ಲಿ ಗೆದ್ದ ನಂತರ ಜನರ ಬಳಿ ಬರುವುದಾಗಲಿ, ಅವರ ಕಷ್ಟ ಕಾರ್ಪಣ್ಯಗಳನ್ನು ವಿಚಾರಿಸುವ ಗೋಜಿಗೆ ಹೋಗುವುದಿಲ್ಲ.

ಈ ರಾಮಾಯ್ಣದಲ್ಲಿ ಬರುವ ಪ್ರತೀ ಪಾತ್ರಗಳಲ್ಲಿಯೂ ಸಾಮಾಜಿಕ ಪ್ರಜ್ಞೆಯನ್ನು ಗುರುತಿಸಬಹುದಾಗಿದೆ. ರಾಮನು ದಶರಥನಿಗೆ ಕೊಟ್ಟ ಮಾತಿನಂತೆ ಕಾಡಿಗೆ ಹೋಗುತ್ತಾನೆ. ಪಿತೃವಾಕ್ಯ ಪರಿಪಾಲನೆಯ ಸಂದರ್ಭದಲ್ಲಿ ರಾಮನು ಕಾಡಿಗೆ ಹೋಗುವ ಸಂದರ್ಭದಲ್ಲಿ ಸೀತೆಯು ಕೂಡ ಜೊತೆಯಾಗುತ್ತಾಳೆ. ಪ್ರಿಯವಾದ ತಮ್ಮ ಲಕ್ಷ್ಮಣನು ತನ್ನ ಅಣ್ಣನನ್ನು ರಕ್ಷಿಸಬೇಕು ಎಂಬ ಕಾರಣದಿಂದ ಅವನ ಜೊತೆ ಹೊರಡಲು ಸಿದ್ಧನಾಗುತ್ತಾನೆ. ಇವರಷ್ಟೇ ರಾಮನ ಮೇಲೆ ಪ್ರೀತಿ, ವಿಶ್ವಾಸ ಅಕ್ಕರೆಯನ್ನು ಇಟ್ಟುಕೊಂಡಿದ್ದ ಕೈಕೆಯ ಮಗ ಭರತನೂ ಸಹ ರಾಮನೊಂದಿಗೆ ಬರಲು ಇಚ್ಚಿಸುತ್ತಾನೆ. ಆದರೆ ರಾಜ್ಯವನ್ನು ನೋಡಿಕೊಳ್ಳಲು ಭರತನು ರಾಜ್ಯದಲ್ಲೇ ಇರಬೇಕೆಂದು ರಾಮನು ಹೇಳಿದ್ದರಿಂದ ಭರತ ಉಳಿಯಬೇಕಾಗುತ್ತದೆ. ಆದರೆ ರಾಮನಿಲ್ಲದ ಆಸ್ಥಾನಕ್ಕೆ ಅವನ ಪಾದುಕೆಗಳನ್ನೇ ಸಿಂಹಾಸನದ ಮೇಲೆ ಇರಿಸಿ ರಾಜ್ಯಭಾರ ಮಾಡುವೆನೆಂದು ಶಪಥ ಮಾಡಿದ ಭರತನ ಸಾಮಾಜಿಕ ಪ್ರಜ್ಞೆ ಇಂದಿನ ವರ್ತಮಾನಕ್ಕೆ ಉಪಯುಕ್ತ ವಿಷಯವಾಗಿದೆ.

ಇಂದಿನ ದಿನಗಳಲ್ಲಿ ಭರತನಂತಹ ಸಂದರ್ಭಬಂದಿದ್ದರೆ ರಾಮ ಹೋದರೆ ತಾನೇ ಸಿಂಹಾಸನವೇರಬಹುದು ಅಂತ ಕಾಯ್ದುಕೊಂಡಿರುವ ಜನರೇ ಹೆಚ್ಚು. ಅಧಿಕಾರದ ದಾಹದಿಂದಾಗಿ ಸಂಬಂಧಕ್ಕೆ ಬೆಲೆ ಇಲ್ಲ ಎನ್ನುವುದು ಈ ನಾಟಕದಲ್ಲಿ ಚರ್ಚಿಸಲಾಗಿದೆ. ಹೀಗೆ ವರ್ತಮಾನದ ಬಿಕ್ಕಟ್ಟುಗಳನ್ನು ಕೃತಿ ವಿಶ್ಲೇಷಿಸುತ್ತದೆ.

ಇದೊಂದು ಏಕಾಂಕ ನಾಟಕವಾದ್ದರಿಂದ ಒಬ್ಬನೇ ವ್ಯಕ್ತಿ ಹಲವು ಪಾತ್ರಗಳನ್ನು ನಿರ್ವಹಿಸುವ ನಾಟಕವಾಗಿದೆ. ಹೆಚ್ಚಿನ ನಾಟಕ ಕೃತಿಗಳು ಮತ್ತು ಪೌರಾಣಿಕ ವಸ್ತುಗಳನ್ನು ಬಳಸಿಕೊಂಡಿರುವ ರಂಗಪಠ್ಯಗಳು ಹೆಚ್ಚು ಗ್ರಾಂಥಿಕವಾದ ಭಾಷೆಯನ್ನೇ ಬಳಸಿಕೊಂಡಿದೆ. ಶ್ರೀರಂಗರ ಏಕಾಂಕ ನಾಟಕವಾದ 'ಅಶ್ವಮೇಧ'ದಲ್ಲಿ ವೆಂಕಪ್ಪನ ಸಂಭಾಷಣಣೆ "ಆಹಾ ಕೈಯೊಳಗ ಗಂಟು–ಗದಡಿ ಏನೂ ಇಲ್ಲ... ಅಂದ ಮೇಲೆ ಕನ್ಯಾ–ಪರೀಕ್ಷಾದ ಯಾತ್ರಕ್ಕೇ ಹೊರಟಿರಬೇಕು... ಅಲ್ಲ ನೋಡಿದೆಯ ಕಮಲಾ... ಕನ್ಯೆಯರ ತಂದೆಯರು ಅಂದರ ಯಾತ್ರಾದ ಸ್ಪೇಶಲ್ ಟ್ರೇನ ಅಂತ ತಿಳಿದು ಬಿಟ್ಯಾರ ಈ ಜನ" ಎಂಬ ಭಾಷೆ ಉತ್ತರ ಕರ್ನಾಟಕದ ಭಾಷೆಯಲ್ಲಿ ಅಭಿವ್ಯಕ್ತಗೊಂಡಿದೆ. ನಾಟಕದುದ್ದಕ್ಕೂ ಉತ್ತರ ಕರ್ನಾಟಕ ಭಾಷೆ ಬಳಕೆಯಾಗಿರುವುದು ಕಂಡು ಬರುತ್ತದೆ. ಆದರೆ 'ರಾಮಯ್ಣ' ನಾಟಕದಲ್ಲಿ ಸಂಪೂರ್ಣ ಜನರಾಡುವ ಆಡುಮಾತಿನ ಶೈಲಿಯನ್ನು ಬಳಸಿಕೊಳ್ಳಲಾಗಿದೆ. ಪ್ರಾದೇಶಿಕ ಸೊಗಡು ತುಂಬಿರುವ ಜನ ಭಾಷೆಯನ್ನು ಬಳಸುವ ಮೂಲಕ ಹೆಚ್ಚು ಗ್ರಾಮೀಣ ಜನರನ್ನು ಒಳಗೊಳ್ಳುವ ಅನಕ್ಷರಸ್ಥರನ್ನು ಒಳಗೊಳ್ಳುವ ಆಯಾಮವನ್ನು ಇಲ್ಲಿಯ ಭಾಷೆ ಪಡೆದುಕೊಳ್ಳುತ್ತದೆ.

ಈ ನಾಟಕದಲ್ಲಿ ರಾಮ ಮತ್ತೆ ತನ್ನನ್ನು ಅಯೋಧ್ಯೆಗೆ ಕರೆದಾಗ ಸೀತೆ ಹೀಗೆ ಪ್ರತ್ಯುತ್ತರ ಕೊಡುತ್ತಾಳೆ. 'ಯಾವ್ದಪ್ಪ ನನ್ ತವ್ರು? ಈಗ ಈ ಬೂಮ್ತಾಯಿನೇ ನನ್ ತಾವ್ರು. ಮಕ್ಳು ದೊಡ್ಡವಾದ್'ವು ಅವ್ಕೇನೂ ನನ್ ಅಗತ್ಯ ಇಲ್ಲ. ನಿಂಗಂತೂ ಕುದ್ಯೋ ವಯಸ್ನಾಗೆ ನನ್ನ ಅಗತ್ಯ ಇದ್ದಿಲ್ಲ. ಸಿಟ್ಟೇನೂ ಇಲ್ಲ ನಿನ್ ಮ್ಯಾಗೆ. ನಾನಿಲ್ದಿದ್ದಾಗ ನನ್ ಜಾಗ್ದಾಗೆ ಇನ್ಯಾರೂ ಇರ್ಬಾರ್ದು ಅಂತ ನನ್ನ ಇಗ್ರಹ ಇಟ್ಕಂಡೆ. ಇಗ್ರಹವೇ ಸಾಕು ಬಿಡು ನಿನ್ಗೆ.......' ಬಹುಶ: ಸೀತೆ ಹಳ್ಳಿಗಮಾರಳ ಭಾಷೆಯಲ್ಲಿ ಮಾತನಾಡುತ್ತಿರುವುದು ಇದೇ ಮೊದಲಿರಬೇಕು. ಇಲ್ಲಿರುವ ಏಕಾಂಕಗಳಲ್ಲಿ ಸಣ್ತಿಮ್ಮಿ ರಾಜಕೀಯದ ಬಗ್ಗೆ ಮಾತನಾಡುತ್ತಾಳೆ. ಸಮಾಜವನ್ನು ತನ್ನ ವಿವೇಕದ ನೋಟದಲ್ಲಿ ವಿಶ್ಲೇಷಿಸುತ್ತಾಳೆ.

ಬರೀ ಭಾಷೆಯ ಮೂಲಕ ಮಾತ್ರವಲ್ಲ ತನ್ನೊಳಗೆ ಬಚ್ಚಿಟ್ಟುಕೊಂಡ ಪ್ರಜ್ಞೆಯೆಂಬ ಬೆಂಕಿಯ ಮೂಲಕ ಸಣ್ತಿಮ್ಮಿಯ ಮಾತುಗಳು ನಮ್ಮನ್ನು ತೀವ್ರವಾಗಿ ಕಾಡುತ್ತದೆ. ಏಕೆಂದರೆ ಅವು ನಮ್ಮನ್ನು ಚಿಂತಿಸುತ್ತದೆ, ಪ್ರೇರೇಪಿಸುತ್ತದೆ ಮತ್ತು ಬದಲಾಯಿಸುತ್ತವೆ.

### ೨. ದನಿನ್ ಚಮ್ಡಾದ್ ಮೆಟ್ ಮೆಟ್ಕಂಡ್ರೆ ಗ್ವಾಮಾತೆ ತುಳ್ದಂಗಲ್ವಾ?

ದೇಶದಲ್ಲಿ ರಾಮಮಂದಿರ ಪರ–ವಿರೋಧದ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಹುಟ್ಟಿದ ಈ 'ಸಣ್ತಿಮ್ಮಿ ರಾಮಾಯ್ಣ' ಧರ್ಮದ ಹೆಸರಿನಲ್ಲಿ ರಾಜಕೀಯ ಮಾಡುವವರಿಗೆ ತಿವಿಯುತ್ತಲೇ ಹೋಗುತ್ತದೆ. ಅದೇ ರೀತಿ ಗೋಹತ್ಯೆ ನಿಷೇಧದ ಕುರಿತು ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಬರೆದಂತಹ 'ದನಿನ್ ಚಮ್ಡದ್ ಮೆಟ್ ಮೆಟ್ಕಂಡ್ರೆ ಗ್ವಾಮಾತೆ ತುಳ್ದಂಗಲ್ವಾ' ಇದರಲ್ಲಿ ಸಣ್ತಿಮ್ಮಿ ಮತ್ತು ಸರೋಜಕ್ಕ ಎಂಬ ಪಾತ್ರಗಳ ನಡುವೆ ನಡೆಯುವ ಸಂಭಾಷಣೆಯಾಗಿದ್ದು, ಗೋವನ್ನು ನಂಬಿ ಬದುಕುವವರ ಬವಣೆ ರಾಜಕೀಯ ಪಕ್ಷಗಳ ಕೆಸರೆರಚಾಟವನ್ನು ಹೇಳುತ್ತಾ ಹೋಗುತ್ತದೆ. ಅಂದರೆಇಲ್ಲಿ ರಾಜಕೀಯ ಪಕ್ಷಗಳು ಜನರ ಸಮಸ್ಯೆಗಳನ್ನು ಪರಿಹರಿಸುವ ಬದಲು ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿವೆ.

ಗೋಹತ್ಯೆ ಮಾಡಬಾರದು ಎಂಬ ಪತ್ರಕ್ಕೆ ಸಹಿ ಹಾಕು ಎಂದು ಸಣ್ತಿಮ್ಮಿ ಬಳಿ ಬಂದ ರಾಜಕೀಯ ಪಕ್ಷವೊಂದರ ಕಾರ್ಯಕರ್ತನಿಗೆ ಅವರು ಕೊಡುವ ಉತ್ತರ ಹೀಗಿದೆ. 'ಏಯ್ ತಲಲ್ಟೆ, ದನಾವ ನೆನ್ನಿ ಮನ್ನಿಂದಾವ ಕುಯ್'ತಿರಾದು? ದನಿನಿಂದ ಏನೇನ್ ಪ್ರಯೋಜ್ನ ಅಂತ ನಂಗೆ ಏಳಕ್ ಬತ್ತೀರಾ, ಯಾವತ್ತಾದ್ರುವೇ ಕೈಯಾಗ್ ಸೆಗ್ಣಿ ಎತ್ತಿದಿಯಾ? ಸೆಗ್ಣಿ ಮಕ್ರಿ ತಲೆ ಮ್ಯಾಲೊತ್ಕೋಂಡೋಗಿ ತಿಪ್ಗೆ ಆಕಿದಿಯಾ? ದನ ಸತ್ರೆ ಎಳ್ದಾಕಕೆ

ಅವರಟ್ಟಿಗೆ ಕರತರೆ, ಇನ್ನ್ಯಾವಗಾರ ಹೋದ್ರೆ ಅಚಅಚ ಅಂತ ನಾಯೋಡಿಸ್‌ದಂಗೋಡಿಸ್ತರೆ. ನಿಮ್ಮಯ್ಯ ಒಬ್ನೆ ಎತ್ ದುಡ್ದಂಗೆ ದುಡಿತಾನೆ ವಲ್ದಾಗೆ, ನೀನ ಅಕ್ರ ಕಲ್ತ್‌ಕಂಡೆ ಅಂತವ ಮಣ್ಣಿಗೆ ಕೈ ಇಕ್ದೆ ಬಿಳಿ ಬಟ್ಟೆ ಉಟ್ಕಂಡು ತಿರ್ಗಾಡೋನು ಬೆಳ್ಗಾಗೆದ್ದು ದನಮುಟ್ಟಿ ಕಣ್ಣೊತ್ಗಳೋ ನಂಗೆ ಏಳಕ್‌ಬತ್ತಿಯಾ ದನ ಗ್ವಾಮಾತೆ ಅಂತವ... ಎಂದು ನಿರ್ಭಯವಾಗಿ ಸಣ್ತಿಮ್ಮಿ ಹೇಳುತ್ತಾಳೆ. ಗೋವನ್ನು ಗೌರವಿಸುವುದು ಎಂದರೆ ಅದನ್ನು ಕೇವಲ ಒಂದು ಜೀವಿಯಾಗಿ ನೋಡುವುದಲ್ಲದೆ ಅವುಗಳುನ್ನು ಪ್ರೀತಿಸಬೇಕು, ರಕ್ಷಿಸಬೇಕು ಎನ್ನುವ ಅವಳ ಸಾಮಾಜಿಕ ಪ್ರಜ್ಞೆಯನ್ನು ನಾಟಕದಲ್ಲಿ ಕಾಣಬಹುದಾಗಿದೆ.

**೩. ಸತ್ಯ ಉಡ್ಕದೂಂದ್ರೆ**

ಹುಟ್ಟುತ್ತಲೇ ಯಾರು ಹೆಣ್ಣಾಗಿರುವುದಿಲ್ಲ. ಅವಳನ್ನು ಹೆಣ್ಣೆಂಬ ಗುರುತಿನೊಂದಿಗೆ ತಯಾರು ಮಾಡಲಾಗುತ್ತದೆ; ಎಂದು ಹೇಳಿರುವ ಸ್ತ್ರೀವಾದಿ ಚಿಂತಕಿ, ಖ್ಯಾತ ವಿಮರ್ಶಕಿ 'ಸಿಮೋನ್ ದಿ ಬೋವಾ'ರವರ ಮಾತನ್ನು ಜಗತ್ತು ಗಂಭೀರವಾಗಿ ಪರಿಗಣಿಸಿದೆ. ಹೆಣ್ಣನ್ನು ಅವಮಾನಗೊಳಿಸುವ, ಶೋಷಿಸುವ ವರ್ಗವನ್ನು ವಿರೋಧಿಸುವ ಪುರುಷ ಪ್ರಧಾನ ವ್ಯವಸ್ಥೆಯನ್ನು ಧಿಕ್ಕರಿಸಿ ನ್ಯಾಯಬದ್ಧವಾದ ಹೋರಾಟಕ್ಕೆ ಅಣಿಯಾಗಿ ಹಲವಾರು ಸಾಮಾಜಿಕ ವೈರುಧ್ಯಗಳಿಗೆ ಮಹಿಳೆ ಗುರಿಯಾಗಿದ್ದಾಳೆ. ಸ್ತ್ರೀ ಶೋಷಣೆಯ ಮೂಲ ಅಡಗಿರುವುದು ಆಕೆ ಪುರುಷನಿಗಿಂತ ಭಿನ್ನವಾದವಳು ಎಂಬ ಕಾರಣಕ್ಕಾಗಿ, ಮಾನವ ಸಮಾಜದ ಉಗಮ ಕಾಲದಿಂದಲೂ ಪುರುಷ ತನ್ನನ್ನು 'ತಾನು' (Self) ಎಂದು ಗುರುತಿಸಿಕೊಂಡರೆ ಸ್ತ್ರೀಯನ್ನು ಪರ ಅಥವಾ ಅನ್ಯ (Other) ಎಂದು ಪರಿಗಣಿಸಿದ್ದಾನೆ. ಇಂತಹ ಪರಿಸರ ಬದಲಾಗಬೇಕೆನ್ನುವುದೇ ಈ ನಾಟಕದ ವಸ್ತು ವಿಷಯವಾಗಿದೆ.

ಹೆಣ್ಣೆಂಬ ಕಾರಣಕ್ಕೆ ಗರ್ಭದಲ್ಲಿರುವಾಗಲೇ ವಸಕಾಕುವಲ್ಲಿಂದ ಪ್ರಾರಂಭವಾಗುವ ಹೆಣ್ಣಿನ ಶೋಷಣೆ ಹುಟ್ಟಿದ ನಂತರ ವಿಷಕುಡಿಸುವ ತನಕ ಹೋಗುತ್ತದೆ. ಚೆನ್ನಾಗಿ ಬದುಕುತ್ತಿದ್ದಾರೆ ಎಂದಾದರೆ ಅವಮಾನ ಮಾಡುವವರೆಗೆ ಮುಂದುವರಿಯುತ್ತದೆ. ಮದುವೆ ಮಾಡಿಕೊಂಡು ಉಸ್ರುಗಟ್ಟಿಸಿ ನೇಣು ಹಾಕಿ ಸಾಯಿಸ್ತಾರೆ ಹಾಗೆ ಸುಡ್ತಾರೆ. ಇಂತಹ ಹೆಣ್ಣಿನ ಶೋಷಣೆ ಬದಲಾಗಿ ಭೂಮಿತಾಯಿ ಮೆಟ್ಟುವ ರೀತಿ ಬದುಕು ನಡೆಯಬೇಕು. ಹುಟ್ಟುವ ಮನುಷ್ಯ ಎಂದಾದರೊಂದು ದಿನ ಸಾಯಲೇಬೇಕು. ಈ ಬದುಕಿಗೆ ಒಬ್ಬ ಜತೆಗಾರ ಬೇಕು, ಆ ಜತೆಗಾರ ದುಡ್ದು ಸಾಕಂಗಿರಬೇಕು, ಅಂದ ಚಂದ ಅನುಭವಿಸುತ್ತಾ ಬಡತನ ಹಂಚಿಕೊಳ್ಳುವಂತಿರಬೇಕು. ಸುಸ್ತಾದಾಗ ರಟ್ಟೆ ಕೊಡ್ಬೇಕು, ಸತ್ತಾಗ ಮಣ್ ಮಾಡೋ ತನಕ ಕಣ್ ರೆಪ್ಪೆಯಲ್ಲಿಟ್ಟು ಸಾಕಂಗಿರಬೇಕು. ಅದು ಬಿಟ್ಟು ಜತೇಲಿ ಬದ್ಕೋಕೆ ಸುಂಕ ಕೇಳೋದು(ವರದಕ್ಷಿಣೆ), ಬಂಗಾರ ಬೇಕೆನ್ನುವುದು, ಬಂಗ್ಲೆ, ಕಾರು, ಬೇಕೆನ್ನುವುದು ಎಷ್ಟು ಸಮಂಜಸ ಎನ್ನುವ ಬಗ್ಗೆ ಈ ನಾಟಕ ತಿಳಿಸುತ್ತದೆ.

'ದುರಾಸೆ ಮನುಸ್ರುನ ಮನುಸ್ರಾಗಿ ಇರಾಕ್ಬಿಟ್ಟಿಲ್ಲ. ಮಾರ್ಕೆಟ್ನಾಗೆ ಮಾರೋ ಸಾಮಾನ್ ಮಾಡಾಕ್ ಬುಟ್ಟೈತೆ' ಎಂದು ತಿಳಿಸಿರುವ ದು.ಸರಸ್ವತಿಯವರು ಈ ನಾಟಕದಲ್ಲಿ 'ನ್ಯಾಯ ಅಂದ್ರೆ ಜೀವ ತೆಗ್ಯದಲ್ಲ ಜೀವ ಕಾಪಾಡದು, ದುಡ್ಮೆಫಲ ಕಿತ್ಕಳದಲ್ಲ ದುಡ್ದು ಉಣ್ಣೋದು, ಅವ್ಮಾನ ಮಾಡೋದಲ್ಲ ನನ್ನಂಗೆ ಇನ್ನೊಂದು ಜೀವ ಅಂತ ಗೌರವಿಸೋದು, ಬೇಕು ಬೇಕು ಅನ್ನೋ ದುರಾಸೆ ಅಲ್ಲ ಇರೋದ್ನ ಅಂಚ್ಕಂಡು ಉಣ್ಣೋದು, ಎದ್ರುಸೋದಲ್ಲ ನಾನಿದ್ದೀನಿ ಎನ್ನುವ ಭರವಸೆ ಹುಟ್ಟಿಸೋದು' ಎನ್ನುವ ಸಾಮಾಜಿಕ ಅರಿವು ಮೂಡಿಸುವ ಪ್ರಯತ್ನವನ್ನು ತಮ್ಮ ಸಣ್ತಿಮ್ಮಿ ಪುರಾಣದಲ್ಲಿ ದು.ಸರಸ್ವತಿಯವರು ತೋರಿಸಿಕೊಟ್ಟಿದ್ದಾರೆ.

**೪. ಆ ತಾಯಿ ಕೊಟ್ ಮೈನ ಅದೆಂಗೈತೋ ಅಂಗ್ ಇಟ್ಕಾಳದ್ ಬುಟ್ಟು ......**

ಈ ನಾಟಕವು ಜಾಗತೀಕರಣ ಸೃಷ್ಟಿಸುತ್ತಿರುವ ಮಾರುಕಟ್ಟೆ ಸಂಸ್ಕೃತಿಯನ್ನು ವಿಮರ್ಶಿಸುತ್ತದೆ. ಬಂಡವಾಳ ಷಾಹಿ ವ್ಯವಸ್ಥೆಯಲ್ಲಿ ಸಮಾಜ, ಸಂಸ್ಕೃತಿ, ಎಲ್ಲವೂ ಸಹ ಅನುಭೋಗಿ ವರ್ಗವಾಗಿಯೇ ಕಾಣಲಾಗುತ್ತದೆ. ಇಂತಹ ಸಂಸ್ಕೃತಿ ಸಮಾಜಕ್ಕೆ ಮೂಲಭೂತವಾಗಿ ಬೇಕಾದ ವಸ್ತುಗಳನ್ನು ಬಿಟ್ಟು ವಿಲಾಸಿ ಜೀವನ ನೆಡಸಲು ಪ್ರೇರೆಪಿಸುತ್ತದೆ. ಜಾಹಿರಾತುಗಳ ಮೂಲಕ ತನ್ನ ವಸ್ತುವನ್ನು ಜನರು ಕೊಳ್ಳುವಂತೆ ಮಾಡುತ್ತದೆ. ಈ ಜಾಹಿರಾತುಗಳು ತಮ್ಮ ಉತ್ಪನ್ನಗಳು ಅಥವಾ ಸೇವೆಗಳನ್ನು ಜನರಿಗೆ ಮಾರಲು ಬಳಸುವ ಒಂದು ಶಕ್ತಿಯುತ ಮಾರ್ಗವಾಗಿದೆ. ಉದಾ: ಒಂದು ಕಾಸ್ಮೆಟಿಕ್ ಜಾಹಿರಾತುವು ಸುಂದರವಾದ ಮಹಿಳೆಯನ್ನು ತೋರಿಸಿ ಆ ಮಹಿಳೆ ತನ್ನ ಕಾಸ್ಮೆಟಿಕ್‌ಗಳನ್ನು ಬಳಸುವುದರಿಂದ ಅಷ್ಟು ಸುಂದರವಾಗಿದ್ದಾಳೆ ಎಂದು ಬಿಂಬಿಸುತ್ತದೆ. ಇದು ಜನರಲ್ಲಿ ಆ ಕಾಸ್ಮೆಟಿಕ್‌ಗಳನ್ನು ಬಳಸುವುದರಿಂದ ತಾವು ಕೂಡ ಆಕೆಯಷ್ಟೇ ಸುಂದರವಾಗಬಹುದು ಎಂದು ಭಾವಿಸಲು ಪ್ರೇರೆಪಿಸುತ್ತದೆ. ಇವುಗಳೆಲ್ಲದರಿಂದ 'ಹೆಣ್ಣನ್ನು' ಜಾಹಿರಾತು ನೀಡುವ ಸೌಂದರ್ಯದ ವಸ್ತುವಾಗಿ ಬಳಸಿಕೊಳ್ಳಲಾಗುತ್ತದೆ. ಹೆಣ್ಣಿನ ಸೌಂದರ್ಯ, ನಡೆ, ನುಡಿ, ದೇಹದ ಅಂಗಾಂಗಗಳ ತ್ವಚ್ಛೆಗೊಳಿಸುವ ಹಲವಾರು ಜಾಹಿರಾತುಗಳು ಮಾರುಕಟ್ಟೆಯನ್ನು ಸೃಷ್ಟಿಸುವ ತಂತ್ರಗಾರಿಕೆಯಾಗಿ ವಿಮರ್ಶಿಸಿರುವುದು ಈ ನಾಟಕದ ಹೆಗ್ಗಳಿಕೆಯಾಗಿದೆ. "ಇದೆಲ್ಲ ಯಾಪಾರ ಮಾಡೋರ ಸಂಚು. ಅವರ ಸಾಮಾನ್ಗೊಳ ಮಾರಾಟಕ್ಕೆ ಎಂಗುಸ್ರ ಮೈ ತೋರ್ಸಿ ಬಲಸ್ಕಂತರೆ ಆಟ ನಿಲ್ಸಿ ಅಂತ ವಸಿ ಜನ ಗಲಾಟೆ ಮಾಡ್ತಾ ಅವ್ರೆ" ಎನ್ನುವ ಜಾಗತೀಕರಣದ ಸಂದರ್ಭದಲ್ಲಿ ಹೆಣ್ಣು ಮತ್ತೊಂದು ಬಗೆಯಲ್ಲಿ ಶೋಷಣೆಗೆ ಒಳಗಾಗುವ ಮಾದರಿಯನ್ನು ಈ ನಾಟಕವು ಚರ್ಚಿಸುತ್ತದೆ. ನಾಗರಿಕ ಜಗತ್ತು ಮತ್ತೆ ಮತ್ತೆ ಈ ಸಾಮಾನ್ಯರ, ಹೆಂಗಸರ ಜೀವನಾನುಭವವನ್ನು 'ತಿಳಿವು' ಅಂತ ಒಪ್ಪಿಕೊಳ್ಳುವುದನ್ನು ನಿರಾಕರಿಸುತ್ತಲೇ ಬಂದಿದೆ. ಅಲ್ಲದೆ ತಿಳಿವನ್ನು ತಾನು ಮಾತ್ರ ನೀಡಬಲ್ಲೆ ಎಂಬ ಅಹಂಕಾರವನ್ನು ಪ್ರದರ್ಶಿಸುತ್ತಲೇ ಬಂದಿದೆ. ಸಣ್ತಿಮ್ಮಿ ಹುಟ್ಟಿಕೊಂಡಿರುವುದೇ ಈ ಅಹಂಕಾರದ ವಿರುದ್ಧ. ಸೌಂದರ್ಯ ಎಂದರೇನು ಎಂದು ನಿರೂಪಿಸುವ ಸೌಂದರ್ಯ ಸ್ಪರ್ಧೆಯ, ಆಯೋಜಕರ, ಬೆಂಬಲಿಗರ, ಅದರ ವ್ಯಾಪಾರಿಗಳ ಠೇಂಕಾರದ ಎದುರಿಗೆ ಸಣ್ಣದನಿಯ ಸಣ್ತಿಮ್ಮಿ ಗಟ್ಟಿಯಾಗಿ ಎದ್ದು ನಿಲ್ತಾಳೆ. (ಆ ತಾಯಿ ಕೊಟ್ ಮೈನ ಅದೆಂಗೈತೋ ಅಂಗ್ ಇಟ್ಕಾಳದ್ ಬುಟ್ಟು) ಮುಂದೆ ಒಂದೊಂದೇ ಹೆಜ್ಜೆಯನ್ನು ದೃಢವಾಗಿ ಇಡುತ್ತಾ ನೋಡುಗರಿಗೆ ಮುಖಾಮುಖಿಯಾಗುತ್ತಾ, ಬಿಚ್ಚಿಕೊಳ್ಳುತ್ತಾ, ತನ್ನೊಳಗನ್ನು ನೋಡಿಕೊಳ್ಳುತ್ತಾ ಬೆಳೆಯುತ್ತಾ ಹೋಗುತ್ತಾಳೆ. "ಮೈಯೆಂಬ ಇಸ್ಮಯ ಲೋಕದ ಒಳಾ....ಗಡೇಲಿ ಮನಸೆಂದೂ ಇಚಿತ್ರ ಕಗ್ಗತ್ತಲ ಗುಹೆ'ಯೊಳಗೆ ಅನ್ವೇಷಿಸುತ್ತಾ ನಡೆಯುವ ಸಣ್ತಿಮ್ಮಿ ನಿರ್ಲಕ್ಷಿತರ ನಿರ್ದಾಕ್ಷಿಣ್ಯ ಕಣ್ನೋಟ ಮಾತ್ರವಲ್ಲ ಎಲ್ಲರೂ ನಿರ್ಲಕ್ಷಿಸುತ್ತಿರುವ ಮತ್ತು ಆ ಕಾರಣಕ್ಕೆ ನರಳುತ್ತಿರುವುದನ್ನು ತೆರೆದ ದಿಕ್ಕಿನಿಂದ ನೋಡಲು ಪ್ರೇರೇಪಿಸುತ್ತಿರುವವಳು ಕೂಡ ಆಗಿದ್ದಾಳೆ.

**೫. ಲವ್ ಪುರಾಣ**

'ಲವ್ ಪುರಾಣ' ಎಂಬ ನಾಟಕವು ಜೀವನದಲ್ಲಿ ಮಾನವೀಯತೆ, ಮನುಷ್ಯ ಸಂಬಂಧ, ದಾಂಪತ್ಯ, ಪ್ರೀತಿ ತುಂಬಿದ ನಡೆಯನ್ನು

ವಿಶ್ಲೇಷಿಸುತ್ತದೆ. "ದಿಟ್ಟಿಸಿ ನೋಡಿ ಅವರೆಲ್ಲರೊಳ್ಗೆ ಅರ್ರೋ ಜೀವಸೆಲೆ ಕಾಣುತ್ತೆ" ಎನ್ನುವ ವ್ಯಾಖ್ಯಾನವು ಮನುಷ್ಯನಾಗಿ ಹುಟ್ಟಿ ಸಮಾಜವು ಅವನನ್ನು ಭ್ರಷ್ಟನನ್ನಾಗಿ ಮಾಡುವ ಪ್ರಕ್ರಿಯೆ ಕುರಿತು ಹೇಳಲಾಗಿದೆ. ನಾವು ಇನ್ನೊಬ್ಬರನ್ನು ಸಹಿಸಲು, ಸಲಹಲು, ಪ್ರೀತಿಸಲು, ಅಡ್ಡಿ ಮಾಡುತ್ತಿರುವುದು ನಾವು ಅವರ ಮೇಲೆ ಯಾವುದೋ ಒಂದು ರೀತಿಯಲ್ಲಿ ಯಜಮಾನಿಕೆ ಮಾಡಲು ಪ್ರಯತ್ನಸುವುದರಿಂದಲೇ ಆಗಿದೆ. ಅದು ಕಾಳಜಿಯ ಹೆಸರಿನಲ್ಲೋ, ಪ್ರೀತಿಯ ಹೆಸರಿನಲ್ಲೋ, ನಡೆಯುತ್ತಿರುತ್ತದೆ. ಇದನ್ನು ಸರಸ್ವತಿಯವರ 'ಲವ್ ಪುರಾಣ' ತಿಳಿಸುತ್ತದೆ. "ಎಲ್ಲ ಮೈನೊಳು ಒಂದೊಂದು ಇಸ್ಮಯ ಲೋಕ ಅದೆ. ಮಿಡಿಯೋದೊಂದೆ ಅದರ ಧರ್ಮ ಎನ್ನುತ್ತಾಳೆ. ಪ್ರೀತಿ ಮೈಯಿ ಮನಸೆಂಬೊ ಲೋಕದ ನಡುವಿನ ಸೇತ್ವೆ ಇದ್ದಂಗೆ. ಕಾಪಾಡೋದು/ಜ್ವಾಪಾನ ಮಾಡೊದೊಂದೆ ಅದರ ಧರ್ಮ ಅದು ಅಲ್ಲೆಲ್ಲೋ ಇಲ್ಲ. ನಿಮ್ಮೊಳ್ಗೆ ನಿಮ್ಮೆದೆವಳ್ಗೆ ಅದೆ ಕಂಡ್ಕಬೇಕಾ..." ಎಂದು ತಿಳಿಹೇಳುತ್ತಾಳೆ. ದೇವನೂರ ಮಹಾದೇವ ಅವರ 'ಸಂಬಂಜ ಅನ್ನಾದು ದೊಡ್ದು ಕನಾ' ಎನ್ನುವ ಮನುಷ್ಯ ಸಂಬಂಧದ ತೀವ್ರ ಸ್ವರೂಪವನ್ನು ಹೇಳುವ ಮಾದರಿಯಲ್ಲಿಯೇ ಇಲ್ಲೂ ಸಹ ವ್ಯಾಖ್ಯಾನಿಸಿರುವುದನ್ನು ಕಾಣಬಹುದು.

**೬. ಬುದ್ಧಾಯಣ**

ಈ ಕೃತಿಯಲ್ಲಿರುವ ನಾಟಕ ಬುದ್ಧಾಯಣ. ವೈದಿಕ ಪುರೋಹಿತಷಾಹಿ ಸೃಷ್ಟಿಸಿದ ಅಸಮಾನತೆ ಮತ್ತು ತಾರತಮ್ಯವನ್ನು ಮೀರಿ ಅಂಬೇಡ್ಕರ್ ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿದರು. ವೈದ್ಧಿಕ ಧರ್ಮದಲ್ಲಿದ್ದಂತಹ ಕೊರತೆಗಳು, ಸಮಸ್ಯೆಗಳು ಬೌದ್ಧಧರ್ಮದತ್ತ ಮುಖ ಮಾಡುವಂತೆ ಮಾಡಿದವು. ಅಂಬೇಡ್ಕರ್ ಹಿಂದೂ ಧರ್ಮವನ್ನು ಅದರ ತಾತ್ವಿಕತೆಯನ್ನು ವಿಮರ್ಶಿಸಿದ ರೀತಿಗೂ, ಬೌದ್ಧಧರ್ಮದ ಗ್ರಹಿಕೆಗಳಿಗೂ, ತಕ್ಷಣದ ಒಂದು ಸಕಾರಾತ್ಮಕ ಉಪಯುಕ್ತತೆ ಇದರಿಂದಾಗಿ ಬಂದದ್ದು. ತುಂಬಾ ಕುತೂಹಲಕಾರಿ ಸಂಗತಿಯೆಂದರೆ ಒಂದು ವಲಯದಲ್ಲಿ ಅಂಬೇಡ್ಕರ್ ಹಿಂದೂ ಧರ್ಮವನ್ನು ವಿಮರ್ಶಿಸಿದ್ದು. ಪಶ್ಚಿಮ ನಾಗರಿಕತೆಯ ಕೆಲವು ಶ್ರೇಷ್ಠ ಮೌಲ್ಯಗಳ ಹಿನ್ನೆಲೆಯಲ್ಲಿ ಸಮಾನತೆ, ಸೋದರತೆ, ಸ್ವಾತಂತ್ರ್ಯಗಳು ಹಿಂದೂ ಧರ್ಮದಲ್ಲಿ ಇಲ್ಲವೇ ಇಲ್ಲ ಎಂದು ತಮ್ಮ ಚಿಂತನೆಯಲ್ಲಿ ಸಮರ್ಥನಾಗಿ ಸಾಬೀತು ಮಾಡಿದರು. ಜತೆಗೆ ಬೌದ್ಧಧರ್ಮ ವೈಧಿಕ ಧರ್ಮವು ಖಂಡಿಸಿದ ಕ್ರಮಗಳನ್ನು ಬಳಸಿಕೊಂಡು ತಮ್ಮ ಟೀಕೆಯನ್ನು ಹೆಚ್ಚು ಆಳವಾಗಿ ಮಾಡಿದರು. ಸಮಸ್ತ ಶೋಷಿತ ಸಮುದಾಯದ ವಿಮೋಚನೆ ಪ್ರೀತಿ ಮತ್ತು ಸಹಾನುಭೂತಿಗಳಿಂದ ಹುಟ್ಟಿದ ಸಮರಶೀಲತೆಯಿಂದ ಸಾಧ್ಯ ಎನ್ನುವುದು ಅಂಬೇಡ್ಕರ್‌ರ ಬೌದ್ಧಧರ್ಮದ ತಿರುಳು. ಈ ಬಗೆಯ ನಿಲುವಿಗೆ ಈಗ ಇನ್ನಷ್ಟು ಪ್ರಾಮುಖ್ಯತೆ ದೊರಕಿರುವುದನ್ನು ಇಡೀ ಜಗತ್ತಿನಾದ್ಯಂತ ಕಾಣಬಹುದಾಗಿದೆ. ಆದ್ದರಿಂದಲೇ ಬೌದ್ಧಧರ್ಮದೆಡೆಗೆ ಇಡೀ ಜಗತ್ತು ವಾಲುತ್ತಿದೆ. ಬುದ್ಧ ತನ್ನ ತ್ರಿಪಿಟಕಗಳಲ್ಲಿ ಮನುಷ್ಯನ ಸಹ ಸಂಬಂಧ, ದಯೆ, ತ್ಯಾಗ, ಮಮತೆ, ಪ್ರೀತಿಯನ್ನು ಸಕಲ ಪ್ರಾಣಿಗಳಲ್ಲೂ ಕಾಣುವಂತೆ ಬೋಧಿಸಿದ್ದನ್ನು ಚರ್ಚಿಸುತ್ತದೆ.

ದಲಿತರ ಮೇಲೆ ನಡೆಯುತ್ತಿರುವ ಶೋಷಣೆಯ ಕುರಿತು 'ಬುದ್ಧಾಯಣ ಹೇಳುತ್ತದೆ. ಬೇರೆ ಧರ್ಮದಲ್ಲಿ ತಮ್ಮನ್ನು ನೋಡುವ ರೀತಿಗೂ, ಬೌದ್ಧಧರ್ಮದಲ್ಲಿ ತಮ್ಮನ್ನು ನೋಡುವ ರೀತಿಗೂ ಇರುವ ವ್ಯತ್ಯಾಸದ ಬಗ್ಗೆ ಸಣ್ತಿಮ್ಮಿ ಮಾತನಾಡುತ್ತಾಳೆ. "ದ್ಯಾನ ವಟ್ಗೆ ಮಾಡ್ತ ಅಂಗೆ ಎಲ್ಲಾಗ್ರೂ ವಂದೆತರ್ದ ತಟ್ಟೆನಾಗೆ, ವಂದೆ ತವ ಉಣ್ಣಾಕಾಕೋರು. ನಾನುವೆ ಮಂಜ್‌ನಾತ್ನು ಯಂಟ್ರೋಣ್‌ಸಾಮಿ ಅಂತೆಲ್ಲ ಸ್ಯಾನೆ ದೇವ್ರು ತಿರ್ಗಿದಿನಿ, ನಮ್ಮೆಲ್ಲರ ದ್ಯಾವ್ರು ದೂರ, ಜತೇಲಿ ಬದ್ಕೊ ಜನ್ಗಳು ದೂರ, ವಟ್ಗೆ ಕುಂತು ಉಣ್ಣಂಗಿಲ್ಲ, ಮುಟ್ಟಿ ಮಾತಾಡಂಗಿಲ್ಲ".

ಬುದ್ಧನ ಕತ್ಗಳ್ನಾ ಅಲ್ಲಿರೋ ಗುರುಗಳು ಬೋ ಚೆಂದಾಗೆ ಯೋಳಾವ್ರೆ. ಎಮ್ಮೆತೊಳ್ಕೊ ಹುಡುಗ, ಕೊಲ್ಲಾರ, ಚೌರ ಮಾಡೋನು, ಕಂದನ್ನ ಕಳ್ಕಂಡು ತಲ್ಕೆಟ್ಟ ಹೆಂಗ್ಸು, ನಾಯಕ್ಸಾನಿ, ರಾಜ್‌ಮಾರಾಜ್ರೊಗ್ಳು ಯಾರ್ಯಾರಿಗೆ ಸಂದವ್ನೆ ಆ ವಯ್ಯ! ಇಂತೋರ್ಗಿಲ್ಲ ಅನ್ನಂಗಿಲ್ಲ...... ಪ್ರತಿಸಾಲು ಓದುವಾಗಲೂ 'ಹೌದು' ಎನಿಸುವ ಚಿಂತನೆಗೆ ಹಚ್ಚುವ ರೀತಿಯಲ್ಲಿ 'ಸಣ್ತಿಮ್ಮಿ'ಗೆ ಜೀವ ತುಂಬಿದ್ದಾರೆ.

ವೈಧಿಕ ಧರ್ಮವು ಆಚರಿಸುವ ಜಾತೀಯತೆ, ಅಸ್ಪ್ರಶ್ಯತೆ, ಶೋಷಣೆ, ತಾರತಮ್ಯ, ಅಸಮಾನ ಪ್ರಕ್ರಿಯೆಗಳು ಸಂಧಿಗ್ಧತೆಯನ್ನು ಉಂಟುಮಾಡಿದವು. ಆದರೆ ಬೌದ್ಧಧರ್ಮದಲ್ಲಿದ್ದ ಮಾನವೀಯ ನೆಲೆಗಳು ದಲಿತರನ್ನು ಆಕರ್ಷಿಸಿತು. ಮನುಷ್ಯರನ್ನು ಮನುಷ್ಯರಂತೆ ಕಾಣುವ, ಪ್ರೀತಿ ತೋರುವ ಸಹಜತೆಯ ಮಾನವ ಕರುಣೆ, ಪ್ರೀತಿ, ಮೈತ್ರಿಯನ್ನು ಬೋಧಿಸಿದ ಬೌದ್ಧಧರ್ಮವೆ ಉತ್ತಮವೆಂದು ನಾಟಕವು ಗ್ರಹಿಸುತ್ತದೆ.

ಈ ನಾಟಕವು ಜಾನಪದ ಪುರಾಣಗಳಿಂದ ಪ್ರೇರಿತವಾಗಿದ್ದು, ಸಾಮಾಜಿಕ ವ್ಯವಸ್ಥೆಯ ಅನ್ಯಾಯಗಳನ್ನು ಬಹಿರಂಗಗೊಳಿಸುವುದರ ಜೊತೆಗೆ ಸಾಮಾಜಿಕ ಬಂಧಗಳ ಮಹತ್ವ, ಸಾಮಾಜಿಕ ಮೌಲ್ಯಗಳ ಮಹತ್ವವನ್ನು ಒತ್ತಿಹೇಳುವ ಮೂಲಕ ಜನಪ್ರಿಯ ನಾಟಕವಾಗಿದೆ.

**ಪರಾಮರ್ಶನ ಗ್ರಂಥಗಳು**


1. ದು. ಸರಸ್ವತಿ–ಸಣ್ತಿಮ್ಮಿ ಪುರಾಣ– ಕವಿಪ್ರಕಾಶನ, ಹೊನ್ನಾವರ, 2018
2. ದೇವನೂರ ಮಹಾದೇವ– ಕುಸುಮ ಬಾಲೆ– ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು–2011
3. ದಾ. ರಾ. ಬೇಂದ್ರೆ – ನಗೆಯ ಹೊಗೆ – ಶ್ರೀಮಾತಾ ಪ್ರಕಾಶನ – ಹುಬ್ಬಳ್ಳಿ – 2008
4. ಟಿ. ಪಿ. ಕೈಲಾಸಂ – ಬಹಿಷ್ಕಾರ – ಬಿ. ಎಸ್. ರಾಮರಾವ್ – ಬೆಂಗಳೂರು
5. ಬಿ. ಟಿ. ಲಲಿತಾ ನಾಯಕ್– ಚಂದ್ರ ಪರಾಭವ– ಕನ್ನಡ ಪುಸ್ತಕ ಪಾಧಿಕಾರ, ಬೆಂಗಳೂರು
6. ವಿಜಯಲಕ್ಷ್ಮಿ ಎಸ್ (ಮಹಾಪ್ರಬಂಧ) – ಶ್ರೀರಂಗರ ನಾಟಕಗಳು ಒಂದು ಅಧ್ಯಯನ – ಮೈಸೂರು ವಿಶ್ವವಿದ್ಯಾನಿಲಯ – 1990